# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್. ಸಿ. ನಂ. 27/2022

**ಪಿ ಡಬ್ಲ್ಯೂ: 13**

**ಸಿ ಡಬ್ಲ್ಯೂ: 15**

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಶುರಾಮ ಸುಣಗಾರ |
| ತಂದೆ ಹೆಸರು | : | ಹನಮಂತಪ್ಪ |
| ವಯಸ್ಸು | : | 64 ವರ್ಷಗಳು |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಬೂಸಪ್ಪಚೌಕ, ಧಾರವಾಡ |

ದಿನಾಂಕಃ 29.09.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 ನನ್ನ ಮಗಳು. ಈಗ ನನಗೆ ನ್ಯಾಯಾಲಯದ ವಿಸಿ ಮುಖಾಂತರ ತೋರಿಸಿದ ಆರೋಪಿ ನನ್ನ ಮಗಳನ್ನು ಪ್ರೀತಿಸುತ್ತೇನೆ ಎಂದು

ಮೋಸ ಮಾಡಿದ ಶಿವಶಂಕರ ಗರಗ ಆಗಿರುತ್ತಾನೆ. ಆತನು ಧಾರವಾಡದ ಹಾವೇರಿಪೇಟೆಯ ನಿವಾಸಿಯಾಗಿರುತ್ತಾನೆ. ಆತನು ನನ್ನ ಮಗಳನ್ನು ಪ್ರೀತಿಸುತ್ತಿದ್ದ ವಿಷಯ ನನಗೆ ಮೊದಲು ಗೊತ್ತಿರಲಿಲ್ಲ. ಸುಮಾರು ಮೂರು ವರ್ಷದ ಹಿಂದೆ ನನ್ನ ಮಗಳನ್ನು ಮನೆಯಿಂದ ಆರೋಪಿಯು ಕರೆದುಕೊಂಡು ಹೋಗಿದ್ದು ಆಕೆಯು ಮನೆ ಬಿಟ್ಟು ಹೋಗಿರುತ್ತಾಳೆ. ಈ ರೀತಿ ಹೋದವಳು ಆಕೆಯು ಕೊಲ್ಲಾಪುರದಲ್ಲಿ ಆತನೊಂದಿಗೆ ಇದ್ದಾಳೆ ಎಂದು ಫೋನ ಮಾಡಿ ನಮಗೆ ತಿಳಿಸುತ್ತಿದ್ದಳು. ಸದರಿ ನನ್ನ ಮಗಳನ್ನು ಆತನು ಕೊಲ್ಲಾಪುರದಲ್ಲಿ ಗೃಹಬಂಧನದಲ್ಲಿ ಇಟ್ಟಿದ್ದ ಎಂದು ಮತ್ತು ನನ್ನ ತಂದೆ ತಾಯಿಗೆ ನಾನು ಆರಾಮ ಇದ್ದೀನಿ ಎಂದು ಫೋನನಲ್ಲಿ ಹೇಳು ಎಂದು ಚಾಕು ತೋರಿಸಿ ಹೆದರಿಸುತ್ತಿದ್ದ. ಮನೆಯಿಂದ ಹೊರಗೆ ಹೋಗುವಾಗ ಬೀಗ ಹಾಕಿ ಹೋಗುತ್ತಿದ್ದ.

ನನ್ನ ಮಗಳು ಅಲ್ಲಿಂದ ಆರೋಪಿಯೊಂದಿಗೆ ಧಾರವಾಡಕ್ಕೆ ಬಂದು ನಮಗೆ ಫೋನ ಮಾಡಿ ವಿಷಯ ತಿಳಿಸಿದ್ದು ನಾವು ಹೋಗಿ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೇವೆ. ನಮ್ಮ ಮನೆಗೆ ಬಂದು ಸುಮಾರು 15 ದಿನ ಆಗಿತ್ತು. ನಂತರ ಆರೋಪಿಯು ಮನೆಯ ಹತ್ತಿರ ಬಂದು ನಿಲ್ಲುವುದು ಹೆದರಿಸುವುದು, ಭಯಪಡಿಸುವುದು, ಫೋನ ಮಾಡುವುದು ಮಾಡುತ್ತಿದ್ದ.

ದಿಃ 21-02-2022 ರಂದು ನಾನು ಗ್ಯಾಸ ಸಿಲೆಂಡರ ತರಲು ಗೋಡೌನಗೆ ಹೋಗಿದ್ದು ನನ್ನ ಹೆಂಡತಿ ಮಾರ್ಕೆಟಗೆ ಹೋಗಿದ್ದಳು. ಆಗ ಮನೆಯಲ್ಲಿ ನನ್ನ ಮಗಳು ತನುಜಾ ಒಬ್ಬಳೇ ಇದ್ದಳು. ನಮ್ಮ ಮನೆಂಲುಲ್ಲಿ ಬಾಡಿಗೆಗೆ ಎಂದು ಅಂಬಿಕಾ ಕಟ್ಟಿಮನಿ ಮೇಲಿನ ಅಂತಸ್ತಲ್ಲಿ ಇದ್ದಳು. ನಾನು ಸಿಲೆಂಡರ ತೆಗೆದುಕೊಂಡು ಮನೆಗೆ ಬಂದಾಗ ಮನೆಯ ಹತ್ತಿರ ಜನರು ಕೂಡಿದ್ದರು. ನಾನು ನನ್ನ ಮಗಳು ತನುಜಾ ಮತ್ತು ಅಂಬಿಕಾನಿಗೆ ಏನಾಯಿತು ಎಂದು ವಿಷಯ ಕೇಳಿದೆನು. ತನುಜಾಳಿಗೆ ತೊಡೆಯ ಹತ್ತಿರ ಚಾಕು ಹಾಕಿದ್ದು ಗಾಯವಾಗಿ ರಕ್ತ ಬರುತ್ತಿತ್ತು. ನಾನು ತನುಜಾಳನ್ನು ವಿಚಾರಿಸಿದಾಗ ಶಿವಶಂಕರನು ಮನೆಗೆ ಬಂದು ತನುಜಾಳ ಕಪ್ಪಾಳಕ್ಕೆ ಹೊಡೆದಾ ಎಂದು ಆಗ ಅಂಬಿಕಾಳು ಬಂದು ಮನೆಯಲ್ಲಿ ತಂದೆ ತಾಯಿ ಯಾರು ಇಲ್ಲ ನೀನು ಹೋಗು ಎಂದು ಆಕೆ ಹೇಳಿದ್ದು ಆತನು ಮನೆಯಿಂದ ಹೊರಗೆ ಹೋದಂತೆ ಮಾಡಿ ಪುನಃ ಬಂದು ತನುಜಾಳ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದ ಎಂದು ಹೇಳಿದಳು. ಆತನು ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿದ್ದಾನೆ. ಆತನು ಸ್ಥಳದಿಂದ ಓಡಿಹೋಗಿದ್ದಾನೆ.

ನಾವು ಆಕೆಯನ್ನು ಸಮಾಧಾನ ಮಾಡಿ ಭೀಮಪ್ಪನ ಆಟೋದಲ್ಲಿ ಜಿಲ್ಲಾ ದವಾಖಾನೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿಂದ ವಿಷಯ ತಿಳಿಸಿ ಪೋಲಿಸಠಾಣೆಗೆ ಬಂದು ಫಿರ್ಯಾದಿ ಕೊಟ್ಟಿದ್ದೇವೆ. ಫಿರ್ಯಾದಿಯನ್ನು ಮಗಳು ಕೊಟ್ಟಿದ್ದಾಳೆ. ಫಿರ್ಯಾದಿ ಕೊಟ್ಟ ನಂತರ ಪೋಲಿಸರು ಮನೆಗೆ ಬಂದು ಪಂಚನಾಮೆ ಮಾಡಿದ್ದಾರೆ.

ನಂತರ ಆಕೆಯ ರಕ್ತ ತಾಗಿದ ಬಟ್ಟೆಯನ್ನು ತಂದು ಕೊಡುವಂತೆ ನನಗೆ ಹೇಳಿದ್ದು ಆಕೆ ಉಟ್ಟಿದ್ದ ಬಟ್ಟೆಯನ್ನು ಪೋಲಿಸರಿಗೆ ನಾನು ತೆಗೆದುಕೊಂಡು ಹೋಗಿ ಕೊಟ್ಟಿದ್ದೇನೆ. ಪೋಲಿಸರು ಠಾಣೆಯಲ್ಲಿ ಸದರಿ ಬಟ್ಟೆಯನ್ನು ನಿಶಾನೆ ಪಿ–5 ರ ಪ್ರಕಾರ ಪಂಚನಾಮೆ ಮಾಡಿ ನನಗೆ ಓದಿ ಹೇಳಿ ನಾನು ಅದಕ್ಕೆ ಸಹಿ ಮಾಡಿದ್ದೇನೆ. ನಿಶಾನೆ ಪಿ–5 ರಲ್ಲಿ ನನ್ನ ಸಹಿಯನ್ನು ನಿಶಾನೆ ಪಿ–5(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಿಶಾನೆ ಪಿ–6 ಮತ್ತು 7 ರ ಪ್ರಕಾರ ಎರಡು ಫೋಟೋಗಳನ್ನು ಪೋಲಿಸರು ತೆಗೆದಿದ್ದಾರೆ. ಸದರಿ ಬಟ್ಟೆಗಳನ್ನು ಈಗ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಫೋಟೋ ತೋರಿಸಲಾಗಿ ಒಂದು ಫೋಟೋದಲ್ಲಿ ತಾನು ಹಾಜರುಪಡಿಸಿದ ಬಟ್ಟೆಗಳಿದ್ದು ಇನ್ನೊಂದು ಫೋಟೋದಲ್ಲಿ ಪ್ಯಾಕ ಮಾಡಿದ ಬಗ್ಗೆ ಇರುತ್ತದೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಈಗಾಗಲೇ ಮು ಮಾ 2 ರಿಂದ 6 ಎಂದು ಗುರುತಿಸಲಾದ ಒಂದು ಹಸಿರು ಕಲರನ ಟಾಪ, ಬಿಳಿ ಮತ್ತು ಕಪ್ಪು ಕಲರನ ಪ್ಯಾಂಟ, ಒಂದು ಕಪ್ಪು ಕಲರಿನ ವೇಲ್, ಒಂದು ಮೆರೂನ ಕಲರನ ಅಂಡರವೇರ ಮತ್ತು ಕಪ್ಪು ಕಲರನ ಬ್ರಾವನ್ನು ಮು. ಮಾ 2 ರಿಂದ 6 ಎಂದು ಗುರುತಿಸಲಾಗಿದ್ದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ನಂತರ ಅದೇ ದಿನ ರಾತ್ರಿ ನಮಗೆ ಪೋಲಿಸರು ಫೋನ ಮಾಡಿ ಆರೋಪಿಯನ್ನು ಹಿಡಿದಿದ್ದೆವೆ ಗುರುತಿಸಲು ಬನ್ನಿ ಎಂದು ಕರೆದಿದ್ದು ನಾನು ಮತ್ತು ಮಗಳು ಹೋಗಿದ್ದೆವು. ಆಗ ಆತನನ್ನು ಠಾಣೆಯಲ್ಲಿ ಇರಿಸಿದ್ದು ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಅಂಬಿಕಾರವರು ನಮ್ಮ ಮನೆಯಲ್ಲಿ ನಾಲ್ಕು ವರ್ಷದಿಂದ ಬಾಡಿಗೆಗೆ ಇದ್ದಾರೆ ಈ ಬಗ್ಗೆಯೂ ಸಹ ಪೋಲಿಸರಲ್ಲಿ ಹೇಳಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿಎನಜೆ (ಎಲಎಡಿಸಿ) ವಕೀಲರಿಂದ:</u>**

ನನ್ನ ಮಗಳು ತನುಜಾ ಮತ್ತು ಆರೋಪಿಗೆ ಸುಮಾರು ಒಂದು ವರ್ಷದಿಂದ ಪರಿಚಯ ಇತ್ತು. ಪರಿಚಯ ಇದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ಶಿವಶಂಕರನಿಗೆ ಏನು ಕೆಲಸ ಎಂದು ನನಗೆ ಗೊತ್ತಿಲ್ಲ. ಆತನು ಏನು ಕೆಲಸ ಮಾಡುತ್ತಾನೆ ಎಂದು ನನಗೆ ಮಗಳು ಹೇಳಲಿಲ್ಲ. ನನ್ನ ಮಗಳು ಶಿವಶಂಕರನ

ಜೊತೆಗೆ ಮನೆ ಬಿಟ್ಟು ಹೋಗುತ್ತಿದ್ದೇನೆ ಎಂದು ಹೇಳಿರಲಿಲ್ಲ, ಆರೋಪಿಯೇ ಆಕಗೆ ಕೊಲ್ಲಾಪುರದಲ್ಲಿ ಕೆಲಸ ಮಾಡಿಸಿ ಕೊಡುತ್ತೇನೆ ಎಂದು ಕರೆದುಕೊಂಡು ಹೋಗಿದ್ದಾನೆ ಎಂದು ನಂತರ ಆಕೆ ತಿಳಿಸಿ ಗೊತ್ತಾಯಿತು. ನನ್ನ ಮಗಳು ನಮಗೆ ತಾನು ತನ್ನ ಸ್ನೇಹಿತರೊಂದಿಗೆ ಕೊಲ್ಲಾಪುರದಲ್ಲಿ ಪ್ಯಾಕಿಂಗ ಕೆಲಸ ಮಾಡುವಲ್ಲಿ ಸೇರಿದ್ದೇನೆ ಎಂದು ಹೇಳಿದ್ದು ಆರೋಪಿಯೊಂದಿಗೆ ಹೋಗಿದ್ದೇನೆ ಎಂದು ಮೊದಲು ಹೇಳಿರಲಿಲ್ಲ. ನನ್ನ ಮಗಳು ಮನೆ ಬಿಟ್ಟು ಹೋಗಿದ್ದಾಳೆ ಎಂದು ನಾನು ಪೋಲಿಸರಿಗೆ ಫಿರ್ಯಾದಿ ಕೊಟ್ಟಿರಲಿಲ್ಲ ಎಕೆಂದರೆ ಆಕೆಯು ತನ್ನ ಗೆಳತಿಯರೊಂದಿಗೆ ಪ್ಯಾಕಿಂಗ ಕೆಲಸಕ್ಕೆ ಹೋಗಿದ್ದೇನೆ ಎಂದು ನಮಗೆ ಹೇಳಿ ಹೋಗಿದ್ದಳು ಮತ್ತು ಮೂರು ನಾಲ್ಕು ದಿನಕ್ಕೊಮ್ಮೆ ನಮಗೆ ಕಾಲ್ ಮಾಡಿ ತಾನು ಆರಾಮ ಆಗಿದ್ದೇನೆ ಎಂದು ಚೆನ್ನಾಗಿದ್ದೇನೆ ಎಂದು ಹೇಳುತ್ತಿದ್ದಳು. ಈ ದಿನ ನಾನು ನ್ಯಾಯಾಲಯದ ಹೇಳಿದ ಪ್ರಕಾರ ಪೋಲಿಸರ ಮುಂದೆ ಕೊಟ್ಟ ಹೇಳಿಕೆಯಲ್ಲೂ ಹೇಳಿದ್ದೇನೆ.

ಸುಮಾರು ಎರಡುವರೆ ಮೂರು ತಿಂಗಳ ನಂತರ ನನ್ನ ಮಗಳು ಆರೋಪಿಯನ್ನು ಧಾರವಾಡಕ್ಕೆ ಹೋಗೋಣ ಎಂದು ಒಟ್ಟಿಗೆ ಕರೆದುಕೊಂಡು ಬಂದು ನಂತರ ನನಗೆ ಪೋನ ಮಾಡಿದ್ದಳು. ಆಕೆ ಧಾರವಾಡಕ್ಕೆ ಬಂದು ನಮ್ಮ ಮನೆಗೆ ಬಂದ 15 ದಿನದ ನಂತರ ಮೇಲೆ ಹೇಳಿದ ಘಟನೆಯಾಗಿರುತ್ತದೆ.

ವಾಪಸು ಬಂದ ನಂತರ ನನ್ನ ಮಗಳು ಆಕೆ ಆರೋಪಿಯೊಂದಿಗೆ ಹೋಗಿದ್ದ ಬಗ್ಗೆ ಆಕೆಯನ್ನು ಗೃಹಬಂದನದಲ್ಲಿ ಇಟ್ಟ ಬಗ್ಗೆ ತಿಳಿಸಿದ್ದು ಆ ಬಗ್ಗೆ ನಾನು ಪೋಲಿಸರಿಗೆ ಕಂಪ್ಲೆಂಟ ಕೊಟ್ಟಿಲ್ಲ.

ನಂತರ ಸದರಿ ಶಿವಶಂಕರನು ದಿನಕ್ಕೆ 3–4 ಬಾರಿ ಮನೆಯ ಹೊರಗಡೆ ಬರುತ್ತಿದ್ದ ಮತ್ತು ಅಡಗಿ ಕುಳಿತಿರುತ್ತಿದ್ದ. ಈ ರೀತಿ ರಾತ್ರಿ 12 ಗಂಟೆ 1 ಗಂಟೆಗೆ ಬರುತ್ತಾನೆ ಎಂದು ಪೋಲಿಸರಿಗೆ ಫಿರ್ಯಾದಿ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಆ ರೀತಿ ನಾವು ಆಲೋಚಿಸಿದಾಗಲೇ ಆರೋಪಿ ಈ ರೀತಿ ಮಾಡಿದ್ದಾನೆ. ಈ ರೀತಿ ಆರೋಪಿಯು ಮಾಡುವುದನ್ನು ನಾನು ಒಂದು ತಿಂಗಳಿನಿಂದ ಗಮನಿಸುತ್ತಿದ್ದೆ.

ನನ್ನ ಮಗಳು ಮತ್ತು ಆರೋಪಿಯು ಮದುವೆ ಮಾಡಿ ಕೊಂಡಿರುವುದಿಲ್ಲ ಮತ್ತು ರಿಜಿಸ್ಟರ ಮದುವೆಯನ್ನು ಸಹ ಮಾಡಿ ಕೊಂಡಿರುವುದಿಲ್ಲ. ಈ ರೀತಿ ಆರೋಪಿಯು ಬಂದು ಮನೆಯ ಹತ್ತಿರ ಬಂದು ಹೋದಾಗ ಆತನನ್ನು ಯಾಕೆ ಬರುತ್ತಿಯಾ ಎಂದು ವಿಚಾರಿಸಿದ್ದೇವೆ. ಆಗ ಆತನು ನಿಮ್ಮ ಮಗಳನ್ನು ಪ್ರೀತಿ ಮಾಡುತ್ತೇನೆ ಎಂದು ಹೇಳಿದ್ದು ನಾವು ಆಕೆಯನ್ನು ಮದುವೆ ಮಾಡಿಕೊಡುವುದಿಲ್ಲ ಬೇರೆ ಕಡೆ ಮದುವೆ ಮಾಡುತ್ತೇವೆ ಎಂದು ಹೇಳಿದ್ದೇವೆ.

ನನ್ನ ಸ್ವಂತ ಎರಡು ಮನೆ ಅಲ್ಲಿ ಇರುತ್ತದೆ. ನಮ್ಮ ಮನೆಯ ಆಜುಬಾಜು ಸುಮಾರು 45 ಮನೆ ಇದೆ ಎಂದರೆ ಸರಿಯಲ್ಲ. ಎರಡು ಮನೆ ಮಾತ್ರ ಇರುತ್ತದೆ ಎಂದು ಹೇಳುತ್ತಾರೆ. ಸ್ಥಳದಲ್ಲಿ ಖುಲ್ಲಾ ಜಾಗ ಯಾವುದು ಇರುವುದಿಲ್ಲ ಕೇವಲ ಮನೆಗಳು ಇರುತ್ತವೆ. ಅಂಬಿಕಾ ನನ್ನ ಮನೆಯಲ್ಲಿಯೇ ಬಾಡಿಗೆಗೆ ಇರುತ್ತಾಳೆ. ಅಂಬಿಕಾ ಮತ್ತು ನನ್ನ ಮಗಳಿಗೆ ಭಾರಿ ಪ್ರೀತಿ ಇದೆ ಎಂದರೆ ಬಾಡಿಗೆದಾರರು ಎಂದು ಮಾತನಾಡಿಸುತ್ತಾರೆ.

ನಮ್ಮ ಮನೆಯ ಎದುರು ಎರಡು ಮನೆ ಮಾತ್ರ ಇದ್ದು ಜನರು ಇರುವುದಿಲ್ಲ. ಕೊರವರ ಓಣಿಯಲ್ಲಿ ಒಟ್ಟು ನಾಲ್ಕು ಮನೆ ಇದ್ದು ಎರಡು ಮನೆಯನ್ನು ಮಾರಿ ಹೋಗಿದ್ದಾರೆ. ಆ ಮನೆಯೂ ಈಗ ಸುಟ್ಟು ಹೋಗಿರುತ್ತವೆ. ಈ ಘಟನೆ ನಡೆದಾಗ ಅಲ್ಲಿ ನಾರಾಯಣ ಭಜಂತ್ರಿಯವರು ವಾಸಿಸುತ್ತಿದ್ದರು. ಅವರು ಕೆಲಸಕ್ಕೆ ಹೋಗಿದ್ದರು. ಅವರ ಹೆಂಡತಿ ಮಕ್ಕಳು ಅಲ್ಲಿ ವಾಸಿಸುತ್ತಿದ್ದರು. ಆತನ ಹೆಂಡತಿ ಮಕ್ಕಳು ಕೆಲಸಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ಯಾರೂ ಇರಲಿಲ್ಲ.

ಆರೋಪಿ ಶಿಅವಶಂಕರ ಗರಗ ನಮಗೆ ಯಾವುದೇ ಸಂಬಂಧ ಇಲ್ಲದಿದ್ದರೂ ಆತನು ನನ್ನ ಮಗಳನ್ನು ಮದುವೆ ಮಾಡಿಕೊಡಿ ಎಂದು ಬೆನ್ನು ಹತ್ತಿದ ಕಾರಣ ಆತನ ಮೇಲೆ ನಾವು ಈ ರೀತಿ ಸುಳ್ಳು ಕೇಸು ಹಾಕಿದ್ದೇವೆ

ಎಂದರೆ ಸರಿಯಲ್ಲ. ಯಾವುದೇ ಘಟನೆ ನಾವು ಹೇಳಿದಂತೆ ಆಗದಿದ್ದರೂ ಆತನ ಮೇಲೆ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಅಂಬಿಕಾ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದ ದಿನ ನಾನು ಆಕೆಯೊಂದಿಗೆ ಕೋರ್ಟಿಗೆ ಬಂದಿದ್ದೆ ಎಂದರೆ ಸರಿ. ನಾನು ಮಗಳ ಒಂದು ಕೇಸು ಮಾಡಿದ್ದು ಅದರಲ್ಲಿ ಸಾಕ್ಷಿ ಹೇಳು ಎಂದು ಅಂಬಿಕಾಳಿಗೆ ನಾನೇ ವಿನಂತಿಸಿದ್ದೆ ಎಂದರೆ ಸುಳ್ಳು. ನನ್ನ ಮಗಳು ಮನೆಯಲ್ಲಿ ಕೆಲಸ ಮಾಡುವಾಗ ಇಳಿಗೆ ಮಣೆ ಮೇಲೆ ಬಿದ್ದು ಚೂಪಾದ ವಸ್ತು ಆಕೆಗೆ ತಾಗಿದ್ದು ಆಕೆ ಗಾಯ ಮಾಡಿಕೊಂಡಿದ್ದು ನಾವು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಾವು ಆರೋಪಿಗೆ ನನ್ನ ಮಗಳನ್ನು ಮದುವೆಯಾಗು ಎಂದುನಾವು ಒತ್ತಡ ಹಾಕಿದ್ದೆವು ಎಂದರೆ ಸುಳ್ಳು.

ಎಂ ಓ 2 ರಿಂದ 6 ಮುದ್ದೆಮಾಲುಗಳು ನನ್ನ ಮಗಳಿಗೆ ಸೇರಿಲ್ಲ ಮತ್ತು ನಾನು ಯಾರಿಗೋ ಸೇರಿದ ವಸ್ತುಗಳನ್ನು ತಂದು ಪೋಲಿಸರಿಗೆ ಕೊಟ್ಟಿದ್ದೇನೆ ಎಂದರೆ ಸುಳ್ಳು. ಘಟನೆಯ ಬಗ್ಗೆ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಪೋಲಿಸರೊಂದಿಗೆ ಮಿಲಾಪಿಯಾಗಿ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಎರಡು ವರ್ಷದ ಹಿಂದೆ ಘಟನೆಯಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಬಂದಾಗ ಅಲ್ಲಿ ಹಲವಾರು ಜನರು ಸೇರಿದ್ದು ಅವರ ಹೆಸರು ಏನು ಎಂದು ಕೇಳಿದರೆ ಸಾಕ್ಷಿಯು ಉಣಕಲ್ ಮತ್ತು ಪಠಾಣ ಇದ್ದರು ಅವರ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮಗಳು ತನುಜಾಳ ಮಾತು ಕೇಳಿ ನಾನು ಆಕೆಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.